# ಪ್ರಾತಃಸ್ಮರಣೀಯ ಸ್ವಾಮಿ ಶಾಂಭವಾನಂದರು

**ತಾರಿಣಿ ಚಿದಾನಂದ**

(ಡಿಸೆಂಬರ್ ಸಂಚಿಕೆಯಿಂದ ಮುಂದುವರಿದಿದೆ)

ವರ್ಷಕ್ಕೆ ಒಮ್ಮೆ ನಡೆಯುತ್ತಿದ್ದ ವಿದ್ಯಾಶಾಲೆ ಮಕ್ಕಳ ವಾರ್ಷಿಕೋತ್ಸವ ಒಂಟಿಕೊಪ್ಪಲು ಬಡಾವಣೆಯಲ್ಲೆಲ್ಲಾ ಹೆಸರು ಪಡೆದಿತ್ತು. ಸಮಯಕ್ಕೆ ಸರಿಯಾಗಿ ಕಾರ್ಯಕ್ರಮ ಪ್ರಾರಂಭ ಮಾಡುತ್ತಿದ್ದರು. ಮಕ್ಕಳ ಪ್ರತಿಭೆಯ ಪ್ರದರ್ಶನಕ್ಕೂ ಅವಕಾಶವಿರುತ್ತಿತ್ತು. ಡ್ರಿಲ್, ಯೋಗಾಸನ, ಪಿರಮಿಡ್ ಮೊದಲಾದ ಕಾರ್ಯಕ್ರಮಗಳನ್ನು ಮಕ್ಕಳು ಅದ್ಭುತವಾಗಿ ಪ್ರದರ್ಶಿಸುತ್ತಿದ್ದರು. ಒಳ್ಳೆಯ ನಾಟಕ, ನೃತ್ಯ, ಹಾಡು, ಎಲ್ಲವೂ ನಡೆಯುತ್ತಿತ್ತು. ಹತ್ತು ಘಂಟೆಗೆ ಸರಿಯಾಗಿ ಕಾರ್ಯಕ್ರಮ ಮುಗಿಸುತ್ತಿದ್ದರು. ಸಾರ್ವಜನಿಕರಿಗೆ ಆಹ್ವಾನ ಇರುತ್ತಿತ್ತು. ವಿದ್ಯಾಶಾಲೆ ಕಾರ್ಯಕ್ರಮವೆಂದು ಒಂಟಿಕೊಪ್ಪಲಿನ ಎಲ್ಲ ಜನಗಳೂ ನೋಡಲು ಬರುತ್ತಿದ್ದರು. ಸಾರ್ವಜನಿಕರಿಂದ ತುಂಬಾ ಪ್ರಶಂಸೆ ಸಿಗುತ್ತಿತ್ತು.

೧೯೬೩-೬೪ರಲ್ಲಿ ದೇಶದಲ್ಲೆಲ್ಲಾ ಸ್ವಾಮಿ ವಿವೇಕಾನಂದರ ಶತಮಾನೋತ್ಸವವನ್ನು ಸಂಭ್ರಮದಿಂದ ಆಚರಿಸಿದ್ದರು. ಆ ಸಮಯ ದಲ್ಲಿ ಸ್ವಾಮಿ ಶಾಂಭವಾನಂದಜಿಯವರು ಮೈಸೂರು ಆಶ್ರಮದ ಅಧ್ಯಕ್ಷರಾಗಿದ್ದರು. ಆಗ ವಿದ್ಯಾಶಾಲೆಯಲ್ಲಿ ಪ್ರೌಢಶಾಲೆವರೆಗೆ ಮಾತ್ರ ತರಗತಿಗಳು ಇದ್ದವು. ವಿವೇಕಾನಂದರ ಶತಮಾನೋತ್ಸವವನ್ನು ಶ್ರೀರಾಮಕೃಷ್ಣ ಆಶ್ರಮದಿಂದ ಸಾರ್ವಜನಿಕವಾಗಿ ಆಚರಿಸಿದರು. ಶತಮಾನೋತ್ಸವದ ಪ್ರಯುಕ್ತ ಮೈಸೂರು ರಾಜ್ಯದ ಎಲ್ಲ ಪ್ರೌಢಶಾಲೆಗಳ ಮಕ್ಕಳಿಗೆ ವಿವೇಕಾನಂದರ ಬಗ್ಗೆ ಪ್ರಬಂಧ ಸ್ಪರ್ಧೆ ಏರ್ಪಡಿಸಿ ಅನೇಕಾನೇಕ ಬಹುಮಾನಗಳನ್ನು ಕೊಟ್ಟಿದ್ದರು. ಈ ಕಾರ್ಯಕ್ರಮವನ್ನು ಬಹಳ ವಿಜೃಂಭಣೆಯಿಂದ ಅರ್ಥಪೂರ್ಣವಾಗಿ ಆಚರಿಸಲಾಗಿತ್ತು.

ಪ್ರಬಂಧ ಸ್ಪರ್ಧೆಯಲ್ಲಿ ಕರ್ನಾಟಕದ ಎಲ್ಲ ಶಾಲೆಗಳ ಮಕ್ಕಳು ಭಾಗವಹಿಸಿದ್ದರು. ಪ್ರೌಢಶಾಲೆ, ಮಾಧ್ಯಮಿಕ ಶಾಲೆ ಮಕ್ಕಳಿಗೆ ಬೇರೆ ಬೇರೆಯಾಗಿ ಸ್ಪರ್ಧೆ ಏರ್ಪಡಿಸಿದ್ದರು. ಆ ಸಂದರ್ಭದಲ್ಲಿ ನನ್ನ ಚಿಕ್ಕಮ್ಮನ ಮಗಳು ಮಹಾಜನ ಪ್ರೌಢಶಾಲೆಯಲ್ಲಿ ಓದುತ್ತಿದ್ದಳು. ಶಾಲೆಯಿಂದ ಅವಳನ್ನು ಆರಿಸಿ ಸ್ಪರ್ಧೆಗೆ ಕಳುಹಿಸಿದ್ದರು. ಸ್ಪರ್ಧೆಯಲ್ಲಿ ಮೊದಲ ಬಹುಮಾನ ಅವಳ ಮುಡಿಗೇರಿತ್ತು. ವಿವೇಕಾನಂದರ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಬಹುಮಾನ ವಿತರಣೆಯೂ ಇತ್ತು. ವಿದ್ಯಾಶಾಲೆ ಆವರಣದಲ್ಲಿ ಕಾರ್ಯಕ್ರಮ ಬಹಳ ವಿಜೃಂಭಣೆಯಿಂದ ಮಾಡಿದರು. ಕಾರ್ಯಕ್ರಮ ವೀಕ್ಷಿಸಲು ಮನೆಯವರೆಲ್ಲಾ ಹೋಗಿದ್ದೆವು. ಸ್ವಾಮಿ ಶಾಂಭವಾನಂದರ ಕಾರ್ಯಕ್ರಮ ವ್ಯವಸ್ಥೆ, ನೈಪುಣ್ಯತೆ, ಸಮಯ ವ್ಯವಸ್ಥೆ, ಶಿಸ್ತು ಎಲ್ಲವೂ ಅಲ್ಲಿ ಎದ್ದು ಕಾಣುತ್ತಿತ್ತು.

ಕಾರ್ಯಕ್ರಮದಲ್ಲಿ ದೊಡ್ಡ ದೊಡ್ಡ ಮಹನೀಯರ ಭಾಷಣಗಳು ಏರ್ಪಾಡಾಗಿದ್ದವು. ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ಕೊಟ್ಟಿದ್ದು ಕಾರ್ಯಕ್ರಮದಲ್ಲಿ ವಿಶೇಷವಾಗಿತ್ತು. ಏಕೆಂದರೆ ಬೇರೆ ಬೇರೆ ತರಗತಿಗಳಿಂದ ನೂರಾರು ವಿದ್ಯಾರ್ಥಿಗಳು ಬಹುಮಾನ ಪಡೆದಿದ್ದರು. ಅಷ್ಟೊಂದು ವಿದ್ಯಾರ್ಥಿಗಳಿಗೆ ಕೇವಲ ಅರ್ಧಗಂಟೆಯೊಳಗೆ ಬಹುಮಾನ ವಿತರಣೆ ನಡೆಯಿತು. ಮೊದಲ ಬಹುಮಾನ ಪಡೆದವರಿಗೆ, ಆ ಶಾಲೆಯ ಗ್ರಂಥಭಂಡಾರಕ್ಕೆ, ದೊಡ್ಡ ನಾಲ್ಕಡಿ ಎತ್ತರದ ಫ್ರೇಂ ಹಾಕಿರುವ ವಿವೇಕಾನಂದ ಫೋಟೋ, ವಿವೇಕಾನಂದರ ಕೃತಿಶ್ರೇಣಿ ಪುಸ್ತಕಗಳು, ಅದರೊಡನೆ ಅನೇಕ ಪುಸ್ತಕಗಳನ್ನು ಕೊಟ್ಟರು. ಬಹುಮಾನ ಪಡೆದ ಶಾಲೆಯ ಮುಖ್ಯೋಪಾಧ್ಯಾಯರಿಗಾಗಿ ಸಣ್ಣ ಅಳತೆಯ ವಿವೇಕಾನಂದರ ಫೋಟೋ, ಅನೇಕ ವಿವೇಕಾನಂದ ಪುಸ್ತಕಗಳು, ಹಾಗೂ ಬಹುಮಾನ ಪಡೆದ ವಿದ್ಯಾರ್ಥಿಗೆ ವಿವೇಕಾನಂದರ ದೊಡ್ಡ ಫೋಟೋ, 'ಕೃತಿಶ್ರೇಣಿ' ಪುಸ್ತಕ ಹಾಗೂ ವಿವೇಕಾನಂದರ ಬಗ್ಗೆ ಇರುವ ಪುಸ್ತಕಗಳನ್ನು ಕೊಟ್ಟರು. ಇಷ್ಟು ಬಹುಮಾನ ಗೆದ್ದವರು ಸ್ಟೇಜ್ ಮೇಲಿನಿಂದ ಹೇಗೆ ತೆಗೆದುಕೊಂಡು ಹೋಗುವುದು? ಅದಕ್ಕೂ ಸ್ವಾಮೀಜಿಯವರು ಒಳ್ಳೆಯ ವ್ಯವಸ್ಥೆ ಮಾಡಿದ್ದರು. ಸ್ಟೇಜ್ ಮುಂಭಾಗದಲ್ಲಿ ಮೊದಲ ಬಹುಮಾನ ಬಂದವರಿಗೆ ಕೊಡಬೇಕಾದ ಎಲ್ಲ ಪುಸ್ತಕ ಫೋಟೋಗಳನ್ನುವೀಕ್ಷಕರಿಗಾಗಿ ಚೆನ್ನಾಗಿ ಕಾಣುವಂತೆ ಕಲಾತ್ಮಕವಾಗಿ ಜೋಡಿಸಿ ವ್ಯವಸ್ಥೆ ಮಾಡಿದ್ದರು. ಹತ್ತು ಜನರ ಬಹುಮಾನ ಪಡೆದವರ ಹೆಸರುಗಳನ್ನು ಕರೆದಾಗ ಪ್ರತಿಯೊಬ್ಬರೂ ಬಹುಮಾನಗಳ ಹತ್ತಿರ ಬಂದು ನಿಲ್ಲುತ್ತಿದ್ದರು. ಅವರ ಹೆಸರು, ಶಾಲೆ ಇತ್ಯಾದಿ ವಿವರಗಳನ್ನು ಓದಿದ ಮೇಲೆ ಪ್ರೇಕ್ಷಕರಿಗೆ ನಮಸ್ಕರಿಸಿ ವೇದಿಕೆಯಿಂದ ನಿರ್ಗಮಿಸುತ್ತಿದ್ದರು. ಅಷ್ಟೊಂದು ಬಹುಮಾನಗಳು ಅರ್ಧಗಂಟೆಯಲ್ಲಿ ವಿತರಣೆಯಾಗಿದ್ದು ಪ್ರೇಕ್ಷಕರಿಗೆಲ್ಲಾ ಹುಬ್ಬೇರಿಸುವಂತಾಗಿತ್ತು: ಎಲ್ಲಾ ಜನರ ಮನಸ್ಸಿನಲ್ಲಿ ವಿವೇಕಾನಂದರ ವಿಚಾರಗಳನ್ನೂ ಆದರ್ಶಗಳನ್ನೂ ಮುಟ್ಟಿಸುವ ಕೆಲಸ ಸ್ವಾಮೀಜಿಯವರ ಈ ಕಾರ್ಯಕ್ರಮದಿಂದ ಯಶಸ್ವಿಯಾಗಿತ್ತು.

ಸ್ವಾಮಿ ಶಾಂಭವಾನಂದ ಅವರಿಗೆ ಕೆಲಸ ಕಾರ್ಯಗಳು ನಡೆಯುತ್ತಿದ್ದಾಗ ಸ್ವಲ್ಪ ಹೆಚ್ಚು ಕಡಿಮೆ ಅಥವಾ ಏರುಪೇರಾದರೂ ಕೂಡಲೇ ಕೋಪ ಬರುತ್ತಿತ್ತು. ಒಂದು ಸಂಜೆ ನಾನು, ಅಕ್ಕ, ಅಮ್ಮ ಆಶ್ರಮದ ಸಂಧ್ಯಾರತಿಗೆ ಹೋಗಿದ್ದೆವು. ಸಾಮಾನ್ಯವಾಗಿ ಸ್ವಾಮೀಜಿ ಅವರು ಪ್ರತಿದಿನ ಆರತಿಗೆ

(ಮುಂದುವರಿಯುವುದು)

ಬರುತ್ತಿದ್ದರು. ಆ ದಿನವೂ ಬಂದು ಕುಳಿತಿದ್ದರು. ಆಶ್ರಮದಲ್ಲಿ ಹೊರಗಿನ ಮಕ್ಕಳಿಗಾಗಿ ಒಂದು 'ಬಾಲಕ ಸಂಘ'ವನ್ನು ಕಟ್ಟಿದ್ದರು. ತುಂಬ ಜನ ಹುಡು ಗರು ಆ ಸಂಘದಲ್ಲಿ ಇದ್ದರು. ಆ ದಿನ ಆರತಿಗೆ ಆ ಮಕ್ಕಳೂ ಬಂದು ಕುಳಿತಿದ್ದರು. ಭಜನೆ ಪ್ರಾರಂಭವಾಯಿತು. ಶ್ರೀರಾಮ ಕೃಷ್ಣರಿಗೆ ಆರತಿ ಎತ್ತುತ್ತಾ 'ಖಂಡನ ಭವಬಂಧನ' ಆರತಿ ಹಾಡು ಪ್ರಾರಂಭವಾಯಿತು. ಸ್ವಾಮಿಗಳ ಹಾಡಿನೊಡನೆ ಬಂದಿದ್ದ ಭಕ್ತರು, ಮಕ್ಕಳು ಎಲ್ಲರೂ ದನಿಗೂಡಿಸುತ್ತಿದ್ದರು. ಬಾಲಕ ಸಂಘದ ಹುಡುಗನೊಬ್ಬನ ಧ್ವನಿ ತುಂಬಾ ಕೀರಲಾಗಿತ್ತು ಜೊತೆಗೆ ತಾರ ಸ್ವರದಲ್ಲಿ ಅವನು ಹಾಡುತ್ತಿದ್ದ. ಶ್ರುತಿಗೆ ಹೊಂದದೆ ತನ್ನದೇ ಕೀರಲು ಸ್ವರದಲ್ಲಿ ಜೋರಾಗಿ ಪ್ರತ್ಯೇಕವಾಗಿ ಕಿರುಚುತ್ತಾ ಭಜನೆ ಹೇಳುತ್ತಿದ್ದ, ಎಲ್ಲರಿಗೂ ಆ ಧ್ವನಿ ತುಂಬ ಕಿರಿಕಿರಿಯಾಗಿತ್ತು ಕೇಳಲು. ಮುಂದೆ ಕುಳಿತಿದ್ದ ಸ್ವಾಮಿ ಶಾಂಭವಾನಂದರಿಗೂ ಕೇಳಲು ತುಂಬ ಅಹಿತವಾಗಿತ್ತು. ಸ್ವಾಮೀಜಿಯವರು ಮುಂದೆ ಕುಳಿತವರು ಎರಡು ಮೂರು ಬಾರಿ ಹಿಂದಿರುಗಿ ನೋಡಿದರು. ಯಾವ ಹುಡುಗ ಹಾಗೆ ಹೇಳುತ್ತಿದ್ದಾನೆ ಎಂದು. ಬಹುಶಃ ಹುಡುಗನಿಗೆ ಅದರ ಕಡೆ ಗಮನವೇ ಇರಲಿಲ್ಲ. ಅವನದೇ ಕಂಠ ದಲ್ಲಿ ಪ್ರತ್ಯೇಕವಾಗಿ ಕಿರುಚಿ ಹಾಡುತ್ತಿದ್ದ. ಇದ್ದಕ್ಕಿದ್ದಂತೆ ಸ್ವಾಮೀಜಿ ಹಿಂದಕ್ಕೆ ತಿರುಗಿ 'ಏ ನಿಲ್ಲಿಸು ಹಾಡುವುದನ್ನು!' ಎಂದು ಹುಡು ಗರ ಕಡೆ ತಿರುಗಿ ಕೂಗಿ ಅಬ್ಬರಿಸಿದರು. ಎಲ್ಲರೂ ಹಾಡುವುದು ನಿಲ್ಲಿಸಿದರು. ಒಂದು ನಿಮಿಷ ನಿಶ್ಯಬ್ದ; ಮೌನ ಆವರಿಸಿತು. ಎಲ್ಲರಿಗೂ ಭಯವಾಗಿತ್ತು . ಸ್ವಾಮೀಜಿ ಕೀರಲು ಕಂಠದ ಹುಡು ಗನ ಕಡೆ ತಿರುಗಿ ''ಎಲ್ಲರ ಜೊತೆ ಧ್ವನಿ ಸೇರಿಸಲು ಆಗದಿದ್ದರೆ ನಿಧಾನ ಸಣ್ಣ ಧ್ವನಿಯಲ್ಲಿ ಹೇಳಿಕೊ. ಅದೂ ಆಗದಿದ್ದರೆ ಮನಸ್ಸಿ ನಲ್ಲಿ ಹೇಳಿಕೋ'' ಎಂದರು. ಆ ಹುಡುಗ ಸ್ವಾಮೀಜಿ ಅವರ ಹಿಂದೆಯೆ ಕುಳಿತಿದ್ದ. ಭಜನೆ ಮುಂದುವರೆಯಿತು.

ಸ್ವಾಮೀಜಿ ಅವರು ವೇದಾಂತ ಶಾಲೆ ಕಟ್ಟಿಸುವಾಗ ಮುಂದೆ ಅದು ಯಾವ ರೀತಿ ನಡೆಸಬೇಕು, ಹೇಗೆ ಮತ್ತು ಯಾವ ರೀತಿ ಯಲ್ಲಿ ಯಾವ ಯಾವ ಕೋರ್ಸ್, ವಿಷಯಗಳನ್ನು ಅಳವಡಿಸ ಬೇಕು, ಮುಂತಾದ ವಿಷಯಗಳನ್ನು ಕುರಿತು ವಿದ್ಯಾತಜ್ಞರ ಹತ್ತಿರ ಮಾತನಾಡುತ್ತಿದ್ದರು. ಅನೇಕ ಸಲ ಕುವೆಂಪು ಅವರ ಹತ್ತಿರ ಈ ವಿಚಾರ, ಅಭಿಪ್ರಾಯಗಳನ್ನು ತಿಳಿಸಿ ಚರ್ಚಿಸು ತ್ತಿದ್ದರು. ಕುವೆಂಪು ಅವರು ಒಂದು ದಿನ ಸ್ವಾಮೀಜಿ ಅವರನ್ನು ನೋಡಲು ಹೋದಾಗ ಸ್ವಾಮೀಜಿ ಅವರು ಕಟ್ಟಡದ ವಿಚಾರಕ್ಕೆ ಕೆಲಸದ ಮೇಲೆ ಎಲ್ಲಿಗೋ ದೂರ ಹೋದವರು ಬಂದು, ಅವರ ಕೊಠಡಿಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಕುವೆಂಪು ಅವರು ಬಂದಿರುವುದನ್ನು ತಿಳಿದು, ತಮ್ಮ ಕೊಠಡಿಗೇ ಬರಲು ಹೇಳಿದರು. ಕುವೆಂಪು ಅವರು ಸ್ವಾಮೀಜಿ ಅವರ ಕೊಠಡಿಗೆ ಹೋದಾಗ ಸ್ವಾಮೀಜಿ ನಿಧಾನವಾಗಿ ಮಂಚದಿಂದ ಎದ್ದರು. ಕುವೆಂಪು ಅವರು ನೋಡುತ್ತಾರೆ, ಮಂಚದ ಮೇಲೆ ಒಂದು ಚಾಪೆ ಹಾಸಿ ಅದರ ಮೇಲೆ ಮೇಲು ಹಾಸು ಹಾಕಿದೆ. ''ಸ್ವಾಮೀಜಿ ಇದೇನು? ಮಂಚದ ಮೇಲೆ ಚಾಪೆ ಹಾಕಿ ಮಲ ಗಿರುವಿರಿ? ಹಾಸಿಗೆ ಇಲ್ಲವೆ?'' ಎಂದು ಕೇಳಿದರು. ಸ್ವಾಮೀಜಿ ನಗುತ್ತಾ ''ಮೊದಲಿನಿಂದಲೂ ಇದೇ ಅಭ್ಯಾಸ. ಮೆತ್ತನೆಯ ಹಾಸಿಗೆ ಉಪಯೋಗಿಸುವುದಿಲ್ಲ. ಚಾಪೆ ಮೇಲೆ ಹಾಸು, ಒಂದು ಹೊದಿಕೆ, ದಿಂಬು ಇದ್ದರೆ ಸಾಕು ನನಗೆ'' ಎಂದರಂತೆ. ತಂದೆ ಯವರು ಮನೆಗೆ ಬಂದ ಮೇಲೆ ಅಮ್ಮನೊಡನೆ ''ಸ್ವಾಮೀಜಿ ಎಷ್ಟು ಸರಳವಾಗಿದ್ದಾರೆ, ಬರಿಯ ಚಾಪೆ ಹಾಕಿ ಮಂಚದ ಮೇಲೆ ಮಲಗುವರು. ಕೊಠಡಿಯಲ್ಲಿಯೂ ಅಗತ್ಯದ ಕೆಲವು ಸಾಮಾನು ಗಳು ಮಾತ್ರ ಇವೆ. ಸ್ವಾಮೀಜಿಯವರನ್ನು ನೋಡಿ ನಾವೆಲ್ಲಾ ಕಲಿಯಬೇಕು. ಸರಳಾತಿಸರಳ ಜೀವನ ಅವರದ್ದು'' ಎಂದರು.

ಸ್ವಾಮಿ ರಂಗನಾಥಾನಂದ ಅವರು ಹೈದರಾಬಾದ್ ರಾಮ ಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದರು. ಕುವೆಂಪು ಅವರು ಮೈಸೂರು ಆಶ್ರಮಕ್ಕೆ ಬಂದಾಗ ಸ್ವಾಮಿ ರಂಗನಾಥಾನಂದರು ಮೈಸೂರು ಆಶ್ರಮದಲ್ಲಿ ಬ್ರಹ್ಮಚಾರಿಯಾಗಿದ್ದರು. ಹಾಗಾಗಿ ಕುವೆಂಪು ಅವರೂ ಸ್ವಾಮಿ ರಂಗನಾಥಾನಂದರೂ ಬಹಳ ಆತ್ಮೀಯರಾಗಿ ದ್ದರು. ಸ್ವಾಮಿ ರಂಗನಾಥಾನಂದರು ಯಾವಾಗ ಮೈಸೂರಿಗೆ ಬಂದಾಗಲೂ ಕುವೆಂಪು ಅವರನ್ನು ಮನೆಗೆ ಬಂದು ಮಾತ ನಾಡಿಸಿ ಹೋಗುತ್ತಿದ್ದರು. ಒಮ್ಮೆ ಅವರು ಮೈಸೂರಿಗೆ ಬಂದಾಗ ಕುವೆಂಪು ಅವರೊಡನೆ ಮಾತನಾಡಲು ಮನೆಗೆ ಬಂದರು. ಇಬ್ಬರೂ ಬಹಳ ಹೊತ್ತು ಮಾತುಕತೆ ನಡೆಸಿದರು. ಸ್ವಾಮೀಜಿ ಹೊರಡುವಾಗ, ''ಪುಟ್ಟಪ್ಪಾ, ಶಾಂಭವಾನಂದರು ತುಂಬ ಉತ್ತಮವಾದ ಈಜುಕೊಳ ಕಟ್ಟಿಸಿದ್ದಾರೆ. ಮೇಲಿಂದ ಹಾರುವ ವ್ಯವಸ್ಥೆಯೂ ಇದೆಯಂತೆ. ನಾಳೆ ಹತ್ತು ಗಂಟೆಗೆ ವಿದ್ಯಾಶಾಲೆಯ ಈಜುಕೊಳದಲ್ಲಿ ನಾನು ಮೇಲಿಂದ ಧುಮುಕಿ ಈಜುವೆ. ನೀವೂ ನೋಡಿ, ಬನ್ನಿ'' ಎಂದು ಹೇಳಿದರು. ಮರುದಿನ ಕುವೆಂಪು ಅವರು ವಿದ್ಯಾಶಾಲೆಗೆ ಹೋದರು. ಈಜುಕೊಳದ ಹತ್ತಿರ ಹೋದಾಗ ಅಲ್ಲಿ ಸ್ವಾಮಿ ರಂಗನಾಥಾನಂದರು ಇರಲಿಲ್ಲ. ಅವರು ಎಲ್ಲಿರುವರು ಎಂದು ವಿಚಾರಿಸಿದಾಗ, ಅವರು ಸ್ವಾಮಿ ಶಾಂಭವಾನಂದರ ಆಫೀಸಿನಲ್ಲಿ ಇದ್ದಾರೆ, ನೀವು ಅಧ್ಯಕ್ಷರ ಆಫೀಸಿಗೆ ಬರಬೇಕೆಂದು ತಿಳಿಸಿದರು. ಕುವೆಂಪು ಅವರು ಆಫೀಸ್ ರೂಂಗೆ ಹೋದಾಗ ಸ್ವಾಮಿ ರಂಗನಾಥಾನಂದರು ಅಲ್ಲೇ ಅಧ್ಯಕ್ಷರ ಹತ್ತಿರ ಮಾತಾಡುತ್ತ ಕುಳಿತಿದ್ದರು. ಸ್ವಾಮೀಜಿಯವ ರನ್ನು ನೋಡಿ ಕುವೆಂಪು ಅವರು, ''ಇಲ್ಲೇ ಇದ್ದೀರಿ, ಈಜಲು ಹೋಗುವುದಿಲ್ಲವೆ?'' ಎಂದು ಕೇಳಿದರು. ಸ್ವಾಮೀಜಿ ಅವರು ''ಪುಟ್ಟಪ್ಪನವರೆ, ನನ್ನ ಪ್ಲಾನ್ ಏನೂ ನಡೀತಿಲ್ಲ. ಅಧ್ಯಕ್ಷರು, 'ಅರವತ್ತನೆ ವಯಸ್ಸಿನ ಮೇಲಿದ್ದೀರ, ಅಭ್ಯಾಸವೂ ಇಲ್ಲದೆ ಬಹಳ ಸಮಯವಾಗಿದೆ; ಈಗ ಏಕಾಏಕಿ ಧುಮುಕಲು ಹೋಗ ಬಾರದು. ಈಜುವುದು, ಹಾರುವುದು ಬೇಡ' ಎಂದರು'' ಎಂದು ನಗುತ್ತಾ, ''ಅಧ್ಯಕ್ಷರು ಒಪ್ಪಿಗೆ ಕೊಟ್ಟರೆ ತಾನೇ ಧುಮುಕು

ವುದು?'' ಎಂದರು. ಸ್ವಾಮಿ ಶಾಂಭವಾನಂದರು, ''ನೋಡಿ ಪುಟ್ಟಪ್ಪನವರೆ, ಅಭ್ಯಾಸ ಬಿಟ್ಟು ಬಹಳ ವರ್ಷಗಳಾಗಿವೆ ಏಕಾಏಕಿ ಈ ವಯಸ್ಸಿನಲ್ಲಿ ಮೇಲಿಂದ ಧುಮುಕುವೆ ಎಂದರೆ ಹೇಗೆ ಅಲ್ಲವೆ? ನಿಧಾನ ಅಭ್ಯಾಸ ಮಾಡಿ ಆಮೇಲೆ ಧುಮುಕುವುದು ಒಳ್ಳೆಯದು ಎಂದು ಹೇಳಿದೆ. ಮೊದಲು ನೀವಿಬ್ಬರೂ ಹೋಗಿ ಈಜುಕೊಳ ನೋಡಿ ಬನ್ನಿ'' ಎಂದು ಇಬ್ಬರನ್ನೂ ಈಜುಕೊಳ ನೋಡಲು ಕಳುಹಿಸಿಕೊಟ್ಟರು; ಇಬ್ಬರೂ ಈಜುಕೊಳವನ್ನು ನೋಡಿ ಮಕ್ಕಳೆಲ್ಲ ಈಜು ಕಲಿಯುತ್ತಿದ್ದ ದೃಶ್ಯವನ್ನು ನೋಡಿ ಹಿಂದೆ ಬಂದರು. ಊಟದ ಸಮಯವಾದ್ದರಿಂದ ಕುವೆಂಪು ಅವರು ಸ್ವಾಮಿ ರಂಗನಾಥಾನಂದರೊಡನೆ ವಿದ್ಯಾಶಾಲೆಯಲ್ಲಿ ಊಟಮಾಡಿ ಮನೆಗೆ ಬಂದರು.

ವಿದ್ಯಾಶಾಲೆಯ ನಿರ್ಮಾಣ ಕಾರ್ಯ ನಡೆಯುತ್ತಿದ್ದಾಗ, ಸ್ವಾಮೀಜಿ ಅವರನ್ನು ನೋಡಲು ಕುವೆಂಪು ಅವರು ಹೋಗುವ ಸಂದರ್ಭದಲ್ಲಿ ನಾನು, ಅಕ್ಕ ಸಮಯವಿದ್ದಾಗಲೆಲ್ಲಾ ತಂದೆಯವರೊಡನೆ ಹೋಗುತ್ತಿದ್ದೆವು. ಅಲ್ಲಿ ಸ್ವಾಮೀಜಿ ಮಕ್ಕಳಿಗೆ ಮಾಡಿರುವ ವ್ಯವಸ್ಥೆ, ಆಟದ ಮೈದಾನ ಎಲ್ಲದಕ್ಕೂ ಮಾರುಹೋಗಿ, ಮನೆಗೆ ಬಂದ ಮೇಲೆ ತಂದೆಯವರ ಹತ್ತಿರ, ''ಹುಡುಗರಿಗೆ ಮಾತ್ರ ಈ ತರದ ಶಾಲೆ ಇದೆ. ಯಾಕೆ ಹುಡುಗಿಯರಿಗೆ ಇಲ್ಲ?'' ಎಂದು ಕೇಳುತ್ತಿದ್ದೆವು. ತಂದೆಯವರು ಒಮ್ಮೆ ಶಾಂಭವಾನಂದರ ಹತ್ತಿರ ನಮ್ಮ ಆಸೆಗಳನ್ನು ಹೇಳಿದಾಗ ''ದೊಡ್ಡವರಾದ ಮೇಲೆ ಮೈಸೂರಿನಲ್ಲಿ ನೀವೆಲ್ಲಾ ಸೇರಿ ಯಾಕೆ ಶಾರದಾ ಮಠ ತೆರೆಯಬಾರದು?'' ಎಂದು ನಮಗೆ ಹೇಳಿದರು.

ಸ್ವಾಮೀಜಿಯವರು ಮಹಿಳೆಯರಿಗಾಗಿ ಒಂದು ಶಾರದಾ ಮಠವನ್ನು ತೆರೆಯಬೇಕು ಎಂಬುದರ ಬಗ್ಗೆ ಕುವೆಂಪು ಅವರ ಹತ್ತಿರ ಮಾತುಕತೆ ನಡೆಸುತ್ತಿದ್ದರು. ''ನಿವೇದಿತಾ ಅವರು ಈ ದೇಶಕ್ಕೆ ಬಂದು ಹೆಣ್ಣು ಮಕ್ಕಳಿಗಾಗಿ ಶಾಲೆ ತೆರೆದರು. ಶಾರದಾ ದೇವಿಯವರೇ ಎಷ್ಟೊಂದು ಉತ್ತೇಜನ ಕೊಡುತ್ತಿದ್ದರು! ಇಷ್ಟು ವರ್ಷಗಳಾದರೂ ಇನ್ನೂ ಮಹಿಳೆಯರಿಗಾಗಿ ಒಂದು ಮಠ ಬರಲಿಲ್ಲವಲ್ಲ ಎಂಬುದು ಎಲ್ಲರ ಅಭಿಪ್ರಾಯ. ಈ ವಿಚಾರವಾಗಿ ಕಲ್ಕತ್ತಾದ ಬೇಲೂರು ಮಠದಲ್ಲಿಯೂ ಎಲ್ಲರೂ ಮಾತುಕತೆ ನಡೆಸುತ್ತಿದ್ದಾರೆ'' ಎಂದು ಸ್ವಾಮೀಜಿ ಹೇಳುತ್ತಿದ್ದರು. ಇದರ ಸಂಬಂಧ ಹೊಸ ಹೊಸ ಸುದ್ದಿಗಳು ತಿಳಿದಾಗ ಕುವೆಂಪು ಅವರಿಗೆ ತಿಳಿಸುತ್ತಿದ್ದರು. ತುಂಬ ಜನ ಮಹಿಳೆಯರು ಶಾರದಾ ಮಠ ಸೇರಲು ಆಕಾಂಕ್ಷಿಗಳಾಗಿದ್ದಾರೆ ಎಂದು ಸ್ವಾಮೀಜಿ ತಿಳಿಸುತ್ತಿದ್ದರು.

೧೯೫೪ರ ಡಿಸೆಂಬರ್ ೨೭ರಂದು ಶ್ರೀಶಾರದಾದೇವಿಯವರ ಜನ್ಮ ಶತಮಾನೋತ್ಸವದ ದಿನ, ಏಳು ಜನ ತ್ಯಾಗ ವ್ರತ ಧಾರಣೆ ಮಹಿಳೆಯರು ಬ್ರಹ್ಮಚರ್ಯ ದೀಕ್ಷೆಯನ್ನು ಕಲ್ಕತ್ತಾದಲ್ಲಿ ಕೈಗೊಂಡರು. ಆ ದಿನ ಮೈಸೂರು ಆಶ್ರಮದಲ್ಲಿ ಶ್ರೀ ಶಾರದಾದೇವಿಯವರ ಶತಮಾನೋತ್ಸವ ಜಯಂತಿಯನ್ನು ತುಂಬ ವಿಜೃಂಭಣೆಯಿಂದ ಆಚರಿಸಿದರು. ಆ ದಿನ ಆಶ್ರಮಕ್ಕೆ ಬಂದು ಪೂಜೆ ಮುಗಿಸಿ ಸಂಜೆ ಮನೆಗೆ ಹೊರಟಿದ್ದ ಕುವೆಂಪು ಅವರನ್ನು ದೂರದಿಂದ ನೋಡಿದ ಸ್ವಾಮಿ ಶಾಂಭವಾನಂದರು ಹತ್ತಿರವಿದ್ದ ಹುಡುಗರ ಹತ್ತಿರ, ''ಪುಟ್ಟಪ್ಪನವರನ್ನು ಬರಲು ಹೇಳು'' ಎಂದರು. ಅವರು ಗೇಟಿನ ಕಡೆಗೆ ನಡೆದು ಬಂದರು. ಇಬ್ಬರೂ ಗೇಟಿನ ಹತ್ತಿರ ಸಂಧಿಸಿದಾಗ ಸ್ವಾಮೀಜಿ ತುಂಬ ಸಂತೋಷದಿಂದ, ''ಈ ದಿನ ಶಾರದಾ ಮಠ ಸ್ಥಾಪನೆಗಾಗಿ ಏಳು ಜನ ಮಹಿಳೆಯರು ಬ್ರಹ್ಮಚರ್ಯ ದೀಕ್ಷೆ ತೆಗೆದುಕೊಂಡರು'' ಎಂಬ ಸುದ್ದಿಯನ್ನು ತಿಳಿಸಿದರು. ಕುವೆಂಪು ಅವರಿಗೂ ತುಂಬ ಸಂತೋಷವಾಯಿತು. ಇಬ್ಬರೂ ಅಲ್ಲೇ ನಿಂತು ಸಂತಸವನ್ನು ಹಂಚಿಕೊಂಡರು.

ಮುಂದಿನ ದಿನಗಳಲ್ಲಿಯೂ ಶಾರದಾ ಮಠದ ಹಂತಹಂತವಾದ ಬೆಳವಣಿಗೆಯ ವಿಚಾರವಾಗಿ ಕುವೆಂಪು ಅವರು, ಸ್ವಾಮೀಜಿ ಅವರು ಸಿಕ್ಕಿದಾಗಲೆಲ್ಲ ಎಲ್ಲ ವಿಚಾರಗಳನ್ನು ಕೇಳಿಕೊಳ್ಳುತ್ತಿದ್ದರು. ಶ್ರೀರಾಮಕೃಷ್ಣ ಮಹಾಸಂಘ ಸ್ಥಾಪನೆಯಾದಂತೆ ಮಹಿಳೆಯರಿಗಾಗಿ ಒಂದು ಮಠ ಸ್ಥಾಪನೆಯಾಗಬೇಕು ಎಂಬ ಸ್ವಾಮಿ ವಿವೇಕಾನಂದರ ಆಶಯ ನೆರವೇರುತ್ತಿದೆ ಎಂದು ಇಬ್ಬರೂ ಸಂತೋಷ ಪಡುತ್ತಿದ್ದರು.

ಸ್ವಾಮಿ ಸೋಮನಾಥಾನಂದಜಿಯವರು ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿಗಳಾಗಿದ್ದರು. ಅವರು ಓದುತ್ತಿದ್ದಾಗ ಕುವೆಂಪು ಅವರ ವಿದ್ಯಾರ್ಥಿಯೂ ಆಗಿದ್ದರು. ಕುವೆಂಪು ಅವರು ಆಶ್ರಮವಾಸಿಯಾಗಿದ್ದಾಗ ಅವರು ಬ್ರಹ್ಮಚಾರಿಯಾಗಿ ಆಶ್ರಮಕ್ಕೆ ಬಂದವರು. ಕುವೆಂಪು ಅವರಿಗೂ ಸ್ವಾಮಿ ಸೋಮನಾಥಾನಂದರೂ ತುಂಬ ಆತ್ಮೀಯರಾಗಿದ್ದರು. ಶ್ರೀರಾಮಕೃಷ್ಣರನ್ನು ಸಾಹಿತ್ಯದ ಮೂಲಕ ಮನೆ ಮನೆ ಮನಮುಟ್ಟುವಂತೆ ಮಾಡಿದವರು ಸ್ವಾಮಿ ಸೋಮನಾಥಾನಂದರು. ಸ್ವಾಮಿ ಶಾಂಭವಾನಂದರು ಮತ್ತು ಸ್ವಾಮಿ ಸೋಮನಾಥಾನಂದರು ಮೈಸೂರು ಆಶ್ರಮದಲ್ಲಿ ಅಶ್ವಿನೀ ನಕ್ಷತ್ರಗಳಂತೆ ಇದ್ದರು ಎಂದರೆ ತಪ್ಪಾಗುವುದಿಲ್ಲ. ಇಬ್ಬರೂ ತುಂಬಾ ವರ್ಷದಿಂದ ಕೊನೆಯವರೆಗೂ ಮೈಸೂರಿನ ಆಶ್ರಮದಲ್ಲಿ ಸೇವೆ ಸಲ್ಲಿಸಿದ್ದಾರೆ. ಸ್ವಾಮಿ ಶಾಂಭವಾನಂದರು ಕಟ್ಟಡ ಕಟ್ಟಿಸುವಾಗ ಅವರ ಕೆಲಸ ಕಾರ್ಯಗಳಿಗೆ ಸಹಾಯಕರಾಗಿ ಇದ್ದರು ಸೋಮನಾಥಾನಂದ ಸ್ವಾಮೀಜಿ. ಕುವೆಂಪು ಅವರು ಪುಸ್ತಕ ವಿಚಾರವಾಗಿ ಮಾತುಕತೆಯಾಡಲು ಸ್ವಾಮಿ ಸೋಮನಾಥಾನಂದ ಅವರನ್ನು ನೋಡಲು ಆಶ್ರಮಕ್ಕೆ ಹೋಗುತ್ತಿದ್ದರು. ಇಂತಹ ಒಂದು ಸಂದರ್ಭದಲ್ಲಿ ಕುವೆಂಪು ಅವರು ಹೋದಾಗ ಸ್ವಾಮಿ ಸೋಮನಾಥಾನಂದರು ಆಯಾಸಗೊಂಡಂತೆ ಕಂಡರು. ಕುವೆಂಪು ಅವರು ''ಏನು ಸ್ವಾಮೀಜಿ, ಆರೋಗ್ಯ ಸರಿ ಇಲ್ಲವೆ?'' ಎಂದು ವಿಚಾರಿಸಿದಾಗ, ಸ್ವಾಮೀಜಿ ಅವರು ''ರಾತ್ರಿ ನಿದ್ದೆ ಬರಲಿಲ್ಲ ಹಾಗಾಗಿ ಆಯಾಸಗೊಂಡಂತೆ ಕಾಣುತ್ತಿದ್ದೇನೆ.'' ಎಂದರು. ಏಕೆ ನಿದ್ದೆ ಬರಲಿಲ್ಲ ಎಂದು ಕೇಳಿ

ದಾಗ ಅವರು ಅದರ ವಿಚಾರ ಹೇಳಿದರು. ''ನೋಡಿ ಪುಟ್ಟಪ್ಪ ನವರೆ, ವೇದಾಂತ ಶಾಲೆ ಕಟ್ಟುತ್ತಿದ್ದಾರೆ. ನಾಳೆ ಕೆಲಸಗಾರರಿಗೆ, ಸಾಮಾನಿಗೆ ಎಲ್ಲ ಹಣ ಕೊಡಬೇಕು. ಇಲ್ಲಿರುವ ಹಣವೆಲ್ಲ ಖರ್ಚಾಗಿದೆ. ಏನು ಮಾಡುವುದು ಎಂದು ನನಗೆ ಚಿಂತೆಯಾಗಿ ನಿದ್ದೆ ಬರಲಿಲ್ಲ. ಆದರೆ ಪಕ್ಕದ ಕೋಣೆಯಲ್ಲಿಯೆ ಮಲಗಿದ್ದ ಸ್ವಾಮಿ ಶಾಂಭವಾನಂದರು ಶ್ರೀರಾಮಕೃಷ್ಣರ ಮೇಲೆ ಭಾರಹಾಕಿ ಯಾವ ಚಿಂತೆಯಿಲ್ಲದೆ ಚೆನ್ನಾಗಿ ಮಲಗಿ ಗೊರಕೆ ಹೊಡೆಯುತ್ತಿದ್ದಾರೆ. ಹಾಗೇ ಆಯಿತು, ಬೆಳಗ್ಗೆ ಯಾರೋ ಭಕ್ತರು ಬಂದು ಸಂಸ್ಥೆಗೆ ಡೊನೇಷನ್ ಕೊಟ್ಟು ಹೋದರು. ಎಲ್ಲ ಸಮಸ್ಯೆ ಒಮ್ಮೆಗೇ ಪರಿಹಾರವಾಯಿತು. ರಾತ್ರಿ ನನಗೆ ನಿದ್ದೆ ಬರದೆ ಫಜೀತಿ ಪಟ್ಟೆ'' ಎಂದರಂತೆ. ಶಾಂಭವಾನಂದ ಸ್ವಾಮೀಜಿಯವರ ಧೈರ್ಯ, ದಿಟ್ಟ ಸ್ವಭಾವ, ಮುಂದಾಲೋಚನೆಗಳಿಂದ ಇಷ್ಟು ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಲು ಸಾಧ್ಯವಾಯಿತು. ಎಂದೂ ಮುಂದಿಟ್ಟ ಹೆಜ್ಜೆಯಿಂದ ಹಿಂದೆ ಸರಿಯುವ ಪ್ರಶ್ನೆಯೇ ಅವರಲ್ಲಿ ಇರಲಿಲ್ಲ ಎಂದು ಹೇಳಿದರು ಸ್ವಾಮೀಜಿಯವರು.

ಸ್ವಾಮಿ ಶಾಂಭವಾನಂದರು ತೋರಿಕೆ, ಪ್ರಚಾರಗಳಿಂದ ದೂರವಿದ್ದರು. ಅವರು ಕಟ್ಟಿಸಿದ ಕಟ್ಟಡಗಳು ಎಲ್ಲರಿಗೂ ಕಾಣುತ್ತಿದ್ದವು. ಆದರೆ ಅವರು ನೂರಾರು ಜನರಿಗೆ ಮಾಡಿರುವ ಸಹಾಯ ಹೆಚ್ಚು ಜನರಿಗೆ ತಿಳಿದಿಲ್ಲ. ಸ್ವಾಮೀಜಿ ಅವರಿಂದ ಸಹಾಯ ಪಡೆದವರಲ್ಲಿ ಕೆ.ಸಿ.ಧಾಮ್ ಒಬ್ಬರು. ಸ್ವಾಮಿ ಶಾಂಭವಾನಂದರು ಅಧ್ಯಕ್ಷರಾಗಿ ಮೈಸೂರಿನ ಆಶ್ರಮಕ್ಕೆ ಬಂದಾಗ ಭಾರತಕ್ಕೆ ಇನ್ನೂ ಸ್ವಾತಂತ್ರ್ಯ ಬಂದಿರಲಿಲ್ಲ. ಭಾರತ ಪಾಕಿಸ್ತಾನ ವಿಭಜನೆಯ ಕಾಲದಲ್ಲಿ ಅನೇಕರು ನಿರಾಶ್ರಿತರಾಗಿ ಭಾರತಕ್ಕೆ ಬಂದರು. ಆ ಸಮಯದಲ್ಲಿ ಕೆ.ಸಿ. ಧಾಮ್ ಎಂಬುವರು ಢಾಕಾದಿಂದ ನಿರಾಶ್ರಿತರಾಗಿ ಬಂದವರು. ಅವರು ಭಾರತದ ಬೇರೆ ಬೇರೆ ಊರಿನಲ್ಲಿ ಹೊಟ್ಟೆ ಪಾಡಿಗಾಗಿ ಕಂಟ್ರಾಕ್ಟರ್ ಕೆಲಸ ಮಾಡಿ, ಕೊನೆಗೆ ಮೈಸೂರಿಗೆ ಬಂದು ನೆಲೆಸಿದರು. ಅವರು ಬಂಗಾಳಿಗಳು. ಅವರಿಗೂ ಆಶ್ರಮದ ಸಂಪರ್ಕವಿತ್ತು. ಆ ಸಮಯದಲ್ಲಿ ಕುವೆಂಪು ಅವರು ಮನೆ ಕಟ್ಟಲು ಕಂಟ್ರಾಕ್ಟರನ್ನು ಹುಡುಕುತ್ತಿದ್ದಾಗ ಆಗಿನ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ದೇಶಿಕಾನಂದರು, ಧಾಮ್ ಅವರು ಒಳ್ಳೆಯ ಕೆಲಸ ಮಾಡಿಸುವವರೆಂದು ಕುವೆಂಪು ಅವರಿಗೆ ಮನೆ ಕಟ್ಟಿಸಲು ಕಳುಹಿಸಿದ್ದರು. ಈ ರೀತಿ ಕುವೆಂಪು ಅವರಿಗೂ ಧಾಮ್ ಅವರಿಗೂ ಪರಿಚಯವಾಯಿತು. ಮುಂದೆ ಪೂಜಾಮಂದಿರ ಮತ್ತು ವಿದ್ಯಾಶಾಲೆ ಕಟ್ಟುವಾಗಲೂ ಸ್ವಾಮಿ ಶಾಂಭವಾನಂದರೂ ಅವರನ್ನು ಕಂಟ್ರಾಕ್ಟರ್ ಆಗಿ ಇಟ್ಟುಕೊಂಡಿದ್ದರು. ವಿದ್ಯಾಶಾಲೆ ಕಟ್ಟಲು ಧಾಮ್ ಅವರ ಶ್ರಮ, ಕೆಲಸ ಅಪಾರ.

ಧಾಮ್ ಅವರು ಕೆಲವು ವರ್ಷ ನಮ್ಮ ಮನೆಯ ಬಲ ಭಾಗದ ರಸ್ತೆ ಬಿಟ್ಟು ಇರುವ ಮನೆಯಲ್ಲಿಯೆ ವಾಸವಾಗಿದ್ದರು, ಧಾಮ್ ಅವರ ಪತ್ನಿಯವರು ಹಾಗೂ ನಮ್ಮ ಅಮ್ಮ ಒಳ್ಳೆಯ ಸ್ನೇಹಿತೆಯರು. ಆಗಾಗ್ಗೆ ನಮ್ಮ ಮನೆಗೂ ಬರುತ್ತಿದ್ದರು. ಅವರ ಮಗ ದೀಪಕ್ ನಮ್ಮ ಅಣ್ಣಂದಿರೊಡನೆ ಆಡಲು ಬರುತ್ತಿದ್ದನು. ತುಂಬಾ ಸಭ್ಯರಾದ ಧಾಮ್ ಕುಟುಂಬದವರು ನಮಗೆಲ್ಲ ಆತ್ಮೀಯರಾಗಿದ್ದರು.

ಸ್ವಾಮೀಜಿ ಅವರು ಕುವೆಂಪು ಅವರ ಹತ್ತಿರ, ''ನೋಡಿ ಧಾಮ್‌ಗೆ ಎಷ್ಟು ಹೇಳುತ್ತಿದ್ದೇನೆ, 'ನೀವೇ ಎಷ್ಟೊಂದು ಮನೆ ಕಟ್ಟುತ್ತಿರುವಿರಿ, ನಿಮಗಾಗಿ ಎರಡು ಮೂರು ಮನೆ ಕಟ್ಟಿ ಇಟ್ಟುಕೊಳ್ಳಿ. ಯಾವಾಗಲೂ ಇದೇ ರೀತಿ ಕೆಲಸ ಮಾಡಲು ಅಗುವುದಿಲ್ಲ. ವಯಸ್ಸಾದಾಗ ಅದೇ ಬಾಡಿಗೆಯಿಂದ ಜೀವಿಸಬಹುದು' ಎಂದು. ಆದರೆ ಅವರು ಕೇಳುತ್ತಲೇ ಇಲ್ಲ. 'ಅಯ್ಯೋ ಸ್ವಾಮೀಜಿ ಇಲ್ಲೇನು ಮನೆಕಟ್ಟುವುದು, ನಮ್ಮೂರಿನಲ್ಲಿ ಕುಂಬಳ ಬೀಜ ಎಸೆದರು ಸಾಕು ದಪ್ಪ ದಪ್ಪ ಕುಂಬಳಕಾಯಿ ಬರುತ್ತೆ' ಎನ್ನುವರು. ಅವರಿಗೆ ಢಾಕಾದಲ್ಲಿ ಬೇಕಾದಷ್ಟು ಒಳ್ಳೆಯ ಭೂಮಿಯಿತ್ತು. ಸ್ವಲ್ಪ ಕೆಲಸ ಮಾಡಿದರೆ ಸಾಕು ಲಕ್ಷಗಟ್ಟಲೆ ಹಣ ಸಂಪಾದಿಸಬಹುದು ಮೊದಲಿನಂತೆ ಎಂದು ಭಾವಿಸಿದ್ದಾರೆ. ಆ ದಿನಗಳು ಮತ್ತೆ ಬರುತ್ತದೆ, ತಾವು ಹಿಂದಕ್ಕೆ ಹೋಗುವೆ ಎಂದು ಭಾವಿಸಿದ್ದಾರೆ. ಅದು ಬಹು ದೂರದ ಕನಸು ಎನ್ನಿಸುತ್ತಿದೆ ನನಗೆ'' ಎಂದು ಹೇಳುತ್ತಿದ್ದರು.

ಸ್ವಾಮಿ ಶಾಂಭವಾನಂದ ಅವರು ದೂರದೃಷ್ಟಿಯಿಂದ ಧಾಮ್ ಅವರಿಗೆ ತುಂಬ ತಿಳುವಳಿಕೆ ಕೊಟ್ಟಿದ್ದರಿಂದ ಧಾಮ್ ಅವರು ಕೊನೆಗೆ ಎರಡು ಮನೆ ಕಟ್ಟಿ ಬಾಡಿಗೆ ಕೊಟ್ಟರು. ಅವರ ಬಂಧುಗಳು, ಸ್ನೇಹಿತರು, ನೆಂಟರು ನೂರಾರು ಜನ ಬಾಂಗ್ಲಾ ದೇಶದಿಂದ ಓಡಿಸಲ್ಪಟ್ಟಾಗ ಎಲ್ಲರೂ ನಿರಾಶ್ರಿತರಾಗಿ ಧಾಮ್‌ರಂತೆ ಭಾರತಕ್ಕೆ ಬಂದರು. ಅವರೆಲ್ಲ ಮೊದಲೇ ಬಂದು ಇಲ್ಲಿ ತಳವೂರಿದ್ದ ಧಾಮ್ ಅವರ ಸಹಾಯ ಯಾಚಿಸಿದಾಗ, ಅವರು ತಮ್ಮ ದುಡಿತದ ಹಣವನ್ನೆಲ್ಲ ಕೊಟ್ಟು ಖಾಲಿ ಕೈಯಾದರು. ಧಾಮ್ ಅವರ ದೇಹ ವಯಸ್ಸಾದಂತೆ ತುಂಬ ದುಡಿತದಿಂದ ಅನಾರೋಗ್ಯಕ್ಕೆ ತುತ್ತಾಯಿತು. ಅವರಿಗೆ ಔಷಧಿಗೆ ಹಣದ ಅಗತ್ಯ ಉಂಟಾಯಿತು. ಧಾಮ್ ಅವರಿಂದ ಹಣ ತೆಗೆದುಕೊಂಡು ಒಳ್ಳೆಯ ಸ್ಥಿತಿಗೆ ಬಂದ ಬಂಧುಗಳು ಯಾರೂ ಸಹಾಯ ಮಾಡಲಿಲ್ಲ. ಧಾಮ್ ಅವರು ತಮ್ಮಿಂದ ತೆಗೆದುಕೊಂಡ ಹಣ ಕೊಡಿ ಎಂದು ಕೇಳಿದಾಗ ಬಂಧುಗಳೆಲ್ಲ ಅವರಿಂದ ದೂರವಾದರು. ಧಾಮ್ ಅವರು ತಮ್ಮ ಔಷಧಿ ಖರ್ಚುವೆಚ್ಚಕ್ಕಾಗಿ ತಾವು ಕಟ್ಟಿದ್ದ ಮನೆಗಳನ್ನು ಮಾರಿ, ಆ ಮನೆಯಲ್ಲೇ ಅವರು ಬಾಡಿಗೆಗೆ ಇರುವ ಪರಿಸ್ಥಿತಿ ಬಂದಿದ್ದು ಶೋಚನೀಯ. ಅವರ ಕಷ್ಟ ನೋಡಿ ಶಾಂಭವಾನಂದ ಸ್ವಾಮೀಜಿ ಅವರು ಧಾಮ್ ಮಗ ದೀಪಕ್‌ಗೆ ವಿದ್ಯಾಶಾಲೆಯಲ್ಲಿಯೇ ಓದಲು ಅವಕಾಶ ಮಾಡಿಕೊಟ್ಟರು. ಧಾಮ್ ಅವರ ಸ್ಥಿತಿ ತುಂಬಾ ಹದಗೆಟ್ಟಾಗ ಶ್ರೀಮತಿ ಧಾಮ್

ನಿರಾಶ್ರಿತರಾಗಿ ಭಾರತಕ್ಕೆ ಬಂದು ಕಲ್ಕತ್ತಾದಲ್ಲಿ ಬದುಕುತ್ತಿದ್ದ ಅವರ ಅಣ್ಣನಿಗೆ ತಿಳಿಸಿದರು. ಅವರ ಅಣ್ಣ, ''ನಾನು ತಿನ್ನುವ ಗಂಜಿಯಲ್ಲೇ ನಿಮಗೂ ಕೊಡುವೆ. ಧಾಮ್ ಅವರನ್ನು ಕರೆದುಕೊಂಡು ಎಲ್ಲ ಬನ್ನಿ'' ಎಂದರು. ಶ್ರೀಮತಿ ಧಾಮ್ ಪತಿಯ ಔಷಧಿಗಾಗಿ ತಮ್ಮ ಮೈಮೇಲಿದ್ದ ಎಲ್ಲ ಒಡವೆಗಳನ್ನೂ ಮಾರಿದ್ದರು. ಕಲ್ಕತ್ತಾಗೆ ಹೋಗಲು ರೈಲು ಟಿಕೆಟ್‌ಗೂ ಕಷ್ಟ ವಾಗಿತ್ತು. ಮನೆಯ ಎಲ್ಲ ಸಾಮಾನುಗಳನ್ನೂ ಮಾರಿ, ಆ ಹಣ ದಲ್ಲಿ ಕಲ್ಕತ್ತಾಗೆ ಹೊರಟರು. ಈ ಎಲ್ಲ ವಿಚಾರ ಶ್ರೀಮತಿ ಧಾಮ್ ಬಂದು ಅಮ್ಮನವರಲ್ಲಿ ಹೇಳಿಕೊಂಡಿದ್ದರು. ಅವರು ಹೊರಟಾಗ ಅಪ್ಪ, ಅಮ್ಮ ಅವರ ಮನೆಗೆ ಹೋಗಿ ಶುಭ ಹಾರೈಸಿ, ಶುಭ ಪ್ರಯಾಣ ಕೋರಿ ಅವರಿಗೆ ಸಹಾಯವಾಗಲಿ ಎಂದು ತಮ್ಮ ಕೈಲಾದಷ್ಟು ಹಣಕೊಟ್ಟರು. ಅವರ ಪತ್ನಿ ಹೇಳಿದರು: ''ಸ್ವಾಮಿ ಶಾಂಭಾವಾನಂದರು ಒಂದಷ್ಟು ಹಣ ಕೊಟ್ಟಿದ್ದಾರೆ. ಎಲ್ಲದರಿಂದ ನನ್ನ ಪ್ರಯಾಣಕ್ಕೆ, ಧಾಮ್ ಅವರ ಔಷಧಿಗೆ ಅನುಕೂಲ ವಾಯಿತು. ಧಾಮ್ ಅವರು ಆಶ್ರಮದಲ್ಲಿ ಕಟ್ಟಡದ ಕೆಲಸ ಮಾಡುತ್ತಿದ್ದಾಗ ಪ್ರತಿ ತಿಂಗಳು ಅವರ ಹಣದಲ್ಲಿ ಮುಂದೆ ಕಷ್ಟ ಕಾಲದಲ್ಲಿ ಉಪಯೋಗವಾಗಲಿ ಎಂದು ಸ್ವಾಮಿಜಿಯವರು ಸ್ವಲ್ಪ ಸ್ವಲ್ಪ ಹಣ ಉಳಿತಾಯ ಎಂದು ತೆಗೆದಿಟ್ಟಿದ್ದರಂತೆ. ಆ ಹಣವನ್ನು ಈಗ ಕೊಟ್ಟಿದ್ದಾರೆ. ಸ್ವಾಮೀಜಿ ಅವರಿಂದ ನಮಗೆ ತುಂಬ ಉಪ ಕಾರವಾಯಿತು. ಇದನ್ನು ನಾವು ಯಾವತ್ತೂ ಮರೆಯುವು ದಿಲ್ಲ'' ಎಂದರು. ಶ್ರೀಮತಿ ಧಾಮ್ ಅವರು ನಮಗೆಲ್ಲ ವಿದಾಯ ಹೇಳಿ ಕಲ್ಕತ್ತ ಸೇರಿದರು. ಮುಂದೆ ಅವರ ವಿಚಾರ ನಮಗೆ ತಿಳಿಯಲಿಲ್ಲ.

ಮೂವತ್ತು ವರ್ಷಗಳೆ ಕಳೆದಿವೆ. ಒಂದು ದಿನ ಬೆಳಿಗ್ಗೆ ಹನ್ನೊಂದು ಗಂಟೆ ಹೊತ್ತಿಗೆ ಲಕ್ಷಣವಾದ ಸೌಮ್ಯಮುಖದ ಮಧ್ಯವಯಸ್ಸಿನ ಮಹನೀಯರು ಮನೆಗೆ ಬಂದರು. ಕುವೆಂಪು ಅವರು ಮುಂದುಗಡೆಯೆ ಕುಳಿತಿದ್ದರು. ಬಂದವರು ನೇರವಾಗಿ ಬಂದು ತಂದೆಯವರ ಕಾಲು ಮುಟ್ಟಿ ನಮಸ್ಕರಿಸಿದರು. ತಂದೆ ಯವರಿಗೆ ಆಶ್ಚರ್ಯ! ''ನಾನು ಧಾಮ್ ಮಗ ದೀಪಕ್'' ಎಂದು ಅವರೇ ಪರಿಚಯಿಸಿಕೊಂಡರು. ''ನಾನು ದೊಡ್ಡ ಸಾಫ್ಟ್ ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಕೆಲಸದ ಮೇಲೆ ಬೆಂಗಳೂರಿಗೆ ಬಂದಿದ್ದೆ. ಮೈಸೂರಿನಲ್ಲಿ , ನಾನು ಬೆಳೆದ ಜಾಗ ಹಾಗೂ ಆಶ್ರಮ, ವಿದ್ಯಾಶಾಲೆ ಎಲ್ಲ ನೋಡಬೇಕೆಂಬ ಆಸೆ ಇತ್ತು . ಈ ದಿನ ನನ್ನ ಆಸೆ ಈಡೇರಿದೆ. ಜೀವನದಲ್ಲಿ ಇಂತಹ ಸಂದರ್ಭ ಮತ್ತೆ ಒದಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ನಮ್ಮ ತಂದೆಯವರು ಕಟ್ಟಿದ ನಿಮ್ಮ ಮನೆ ಏನೂ ವ್ಯತ್ಯಾಸವಾಗದೆ ಹಾಗೇ ಇದೆ. ನಾನು ಆಟವಾಡಿದ ಮನೆಯಲ್ಲವೆ? ನೋಡಿ ದೊಡನೆ ಗೊತ್ತಾಯಿತು. ಇಡೀ ಮೈಸೂರು ಬದಲಾದರೂ ನಿಮ್ಮ ಮನೆ ಹಾಗೇ ಇದೆ. ಎದುರಿಗೆ ನೀವೇ ಸಿಕ್ಕದ್ದು ತುಂಬ ಸಂತೋಷವಾಯಿತು. ನಮ್ಮ ತಾಯಿ ನಿಮ್ಮೆಲ್ಲರಿಗೂ ನಮಸ್ಕಾರ ತಿಳಿಸಿದ್ದಾರೆ. ಪೂಜ್ಯ ಶಾಂಭವಾನಂದರು ಇದ್ದ ಆಶ್ರಮಕ್ಕೆ ಬರದೆ ಹೋಗಲು ಆಗುತ್ತದೆಯೆ? ಪ್ರತಿದಿನ ನಮ್ಮ ಅಮ್ಮ ಎದ್ದವರೆ ಸ್ವಾಮೀಜಿ ಅವರಿಗೆ ನಮಸ್ಕಾರ ಅರ್ಪಿಸಿ ಕೆಲಸ ಪ್ರಾರಂಭಿಸು ವರು. ಸ್ವಾಮಿ ಶಾಂಭವಾನಂದರೇ ನಾನು ಉತ್ತಮ ಮಟ್ಟದ ಜೀವನ ಸಾಗಿಸಲು ಕಾರಣ. ಅವರ ಮಾರ್ಗದರ್ಶನ, ಅವರ ಸಹಾಯದಿಂದ ನಾನು ಎಂಜಿನಿಯರ್ ಆದೆ. ನಾವು ಕಲ್ಕತ್ತಾಗೆ ಹೋಗಿ ಒಂದು ವರ್ಷದ ಮೇಲೆ ಧಾಮ್ ಅವರು ತೀರಿ ಕೊಂಡರು'' ಎಂದು ತಮ್ಮ ವಿಚಾರವೆಲ್ಲ ತಿಳಿಸಿಗ, ''ಶ್ರೀ ರಾಮಕೃಷ್ಣರ ಕೃಪೆ ನನ್ನ ಬಾಳಿಗೆ ಸ್ವಾಮಿ ಶಾಂಭವಾನಂದರ ರೂಪದಲ್ಲಿ ಬಂದು ಆಶೀರ್ವದಿಸಿದೆ'' ಎಂದರು. ಹೀಗೆ ಸ್ವಾಮಿ ಶಾಂಭವಾನಂದರಿಂದ ನಾನಾ ರೀತಿಯ ಸಹಾಯ, ಸ್ಫೂರ್ತಿ ಪಡೆದು ನೂರಾರು ಜನರು ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಮೈಸೂರು ಶ್ರೀರಾಮಕೃಷ್ಣ ಆಶ್ರಮವು ಸ್ವಾಮಿ ಶಾಂಭವಾ ನಂದರನ್ನು ಅಧ್ಯಕ್ಷರಾಗಿ ಪಡೆದದ್ದು ನಮ್ಮೆಲ್ಲರ ಪುಣ್ಯ.

ಸ್ವಾಮಿ ಶಾಂಭವಾನಂದರು ಕೊಡಗಿನ ಪೊನ್ನಂಪೇಟೆ ಆಶ್ರಮವನ್ನು ಪ್ರಾರಂಭ ಮಾಡಿದವರು. ಅಲ್ಲಿಯೂ ನಾನಾ ರೀತಿ ಜನಹಿತ ಕಾರ್ಯವನ್ನು ಮಾಡಿರುವರು. ಮಲೇರಿಯಾ ಕಾಯಿಲೆಯಿಂದ ತತ್ತರಿಸುತ್ತಿದ್ದ ಮಲೆನಾಡಿನ ಭಾಗವಾದ ಕೊಡಗಿನಲ್ಲಿ ಮಲೇರಿಯಾ ನಿರೋಧ ಕಾರ್ಯದಲ್ಲಿ ಯಶಸ್ವಿ ಯಾದರು. ಜನಗಳಿಗೆ ಮಲೇರಿಯಾ ಬಗ್ಗೆ ತಿಳುವಳಿಕೆ ಕೊಡಲು ಅವರೇ 'ಸೊಳ್ಳೆಪಾಟ್' ಎಂಬ ಕೊಡವ ಭಾಷೆಯ ಲಾವಣಿ ಯನ್ನುರಚಿಸಿ ಸಣ್ಣ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದರು. ಅದರ ಮೂಲಕ ಎಲ್ಲರಿಗೆ ಮಲೇರಿಯಾ ಬಗ್ಗೆ ತಿಳುವಳಿಕೆ ಉಂಟಾಗುವಂತೆ ಮಾಡಿದರು. ಅವರು 'ಸೊಳ್ಳೆಪಾಟ್' ಪುಸ್ತಕ ವೊಂದನ್ನು ಅವರು ಕುವೆಂಪು ಅವರಿಗೂ ಕೊಟ್ಟಿದ್ದರು.

ಅವರು ಮಾಡಿದ ಇನ್ನೊಂದು ಅಮೂಲ್ಯ ಕೆಲಸ, ಜೇನು ಸಾಕಣೆಯನ್ನು ಪ್ರಚಾರಕ್ಕೆ ತಂದಿದ್ದು. ಭಾರತದಲ್ಲೇ ಮೊದಲ ಬಾರಿಗೆ 'ಕೊಡಗಿನ ಜೇನು ಮತ್ತು ಮೇಣ ಉತ್ಪಾದಕರ ಸಂಘ' ವನ್ನು ಸ್ಥಾಪಿಸಿದರು ಸ್ವಾಮೀಜಿ. ಈಗ ಕರ್ನಾಟಕದ ಎಲ್ಲೆಡೆ ಜೇನು ಸಹಕಾರ ಸಂಘಗಳು ಸರ್ಕಾರದಿಂದ ನಡೆಸಲ್ಪಡುತ್ತಿವೆ. ಕೊಡಗಿನ ಜೇನು ಪರದೇಶದ ಜೇನಿಗಿಂತಲೂ ಉತ್ತಮವಾದದ್ದು ಎಂದು ಮೈಸೂರಿನ 'ಕೇಂದ್ರ ಆಹಾರ ಸಂಶೋಧನಾ ಸಂಸ್ಥೆ' ಮಾಡಿದ ಪರೀಕ್ಷೆಗಳಿಂದ ತಿಳಿದು ಬಂದಿರುವುದು ಹೆಮ್ಮೆಯ ವಿಷಯ. ಕುವೆಂಪು ಅವರು ಸ್ವಾಮೀಜಿ ಅವರಿಂದ ಪ್ರಭಾವಿತ ರಾಗಿ ತಮ್ಮ ಮನೆಯಲ್ಲೂ ಜೇನನ್ನು ಸಾಕಿದ್ದರು. ಸ್ವಾಮಿ ಶಾಂಭವಾನಂದರಿಂದ ಮಲೆನಾಡಿನ ಎಲ್ಲ ಭಾಗಗಳಲ್ಲಿಯೂ ಜೇನು ವ್ಯವಸಾಯ ತುಂಬ ಪ್ರಚಾರಕ್ಕೆ ಬಂದಿದೆ. ತಾವು ಕಟ್ಟಿದ ಸಂಸ್ಥೆಗಳಿಗೆ ಮಾತ್ರ ವಲ್ಲದೆ, ತಾವು ಹುಟ್ಟಿದ ಊರಿಗೆ ಕೂಡಾ ಮಹತ್ತರ ಕೊಡುಗೆಗಳನ್ನು ನೀಡಿದ ಸ್ವಾಮಿ ಶಾಂಭವಾನಂದರು